299 (26) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ ಎಸ್ ಹೆಚ್ ಐ ಪಿ ಯೋಜನೆಯಡಿಯಲ್ಲಿ ಮೊದಲನೆಯ ಹಂತದಲ್ಲಿ ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ವಿಶ್ವಬ್ಯಾಂಕ್‌ನಿಂದ ಪಡೆದಿರುವ ಸಾಲದ ಮೊತ್ತವಷ್ಟು,

ಆ) ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು,

ಇ) ಎಷ್ಟು ಕಿಮೀ, ರಾಜ್ಯ ಹೆದ್ದಾರಿ ಗಳನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ಬಡ್ಡಿದರವೆಷ್ಟು,

ಈ) ಕೆ ಎಸ್ ಹೆಚ್ ಐ ಪಿ (ರಾಜ್ಯ ಹೆದ್ದಾರಿ ಯೋಜನೆ) ರಾಯಚೂರು, ಬೆಳಗಾವಿ, ಬಿಜಾಪೂರ ಹಾಗೂ ಗುಲ್ಬರ್ಗಾ ಜಿಲ್ಲೆಗಳ ಬಹಳಷ್ಟು ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಕೈಗೆತ್ತಿಕೊಂಡ ಕಾಮಗಾರಿಗಳು ಕಳಪೆಗುಣಮಟ್ಟದಾದರಿಂದ ಪುನಃ ಆ ರಾಜ್ಯ ಹೆದ್ದಾರಿಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಆಯ್ದ 2375 ಕಿಮೀ ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸುಮಾರು ರೂ 2030 00 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು (ಯೋಜನಾ ವೆಚ್ಚ) ತಯಾರಿಸಿದ್ದು, ಇದರಲ್ಲಿ ರೂ 1635 11 ಕೋಟಿಗಳನ್ನು ಸಾಲದ ರೂಪದಲ್ಲಿ ಪಡೆಯಲಾಗಿದೆ

ಆ) ಡಿಸೆಂಬರ್ 2006 ರ ಅಂತ್ಯದವರೆಗೆ ಆಗಿರುವ ವೆಚ್ಚ ರೂ 1827 15 ಕೋಟಿಗಳು

ಇ) ಡಿಸೆಂಬರ್ 2006 ರ ಅಂತ್ಯದವರೆಗೆ ಅಭಿವೃದ್ಧಿ ಪಡಿಸಿರುವ ರಸ್ತೆಗಳ ಉದ್ದ 2079 ಕಿಮೀ ಗಳು ಬಾಹ್ಯ ನೆರವಿನ ಯೋಜನೆಯಡಿಕೈಗೊಂಡ

ಕಾಮಗಾರಿಗಳಿಗೆ (Externally aided project) ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಬಡ್ಡಿ ದರದ ವಿವರಗಳು ಕೆಳಕಂಡಂತೆ ಇದೆ ಈ ಬಡ್ಡಿ ಹಣವನ್ನು ರಾಜ್ಯ ಸರ್ಕಾರವು ನೀಡುವುದು

2001–02	12 5%
2002–03	11 5%
2003–04	10 5%
2004–05	09 0%
2005–06	09 0%

ಈ) ಈ ನಾಲ್ಕು ಜಿಲ್ಲೆಗಳಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ 668 01 ಕಿಮೀ ರಸ್ತೆಗಳನ್ನು ಮೇಲ್ದರ್ಜೆಗೆ (upgradation) ಮತ್ತು 679 38 ಕಿಮೀ ರಸ್ತೆಗಳನ್ನು ಪುನಃಶ್ಚೇತನ (Rehabilitation) ಅಡಿಯಲ್ಲಿ ಅಭಿವೃದ್ಧಿಗೊಳಿಸಲು ತೆಗೆದುಕೊಳ್ಳಲಾಗಿದೆ

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನಾ ಅಡಿಯಲ್ಲಿ ಮೇಲ್ದರ್ಜೆಗೇರಿಸುವ ಕಾಮಗಾರಿಗಳನ್ನು ಮತ್ತು ಕೆಲವು ಪುನಃಶ್ಚೇತನ ಕಾಮಗಾರಿಗಳನ್ನು ಹೆಚ್ಚಿನ ಪರಿಣಿತಿ ಹಾಗೂ ಅನುಭವ ಹೊಂದಿರುವ ಅಂತರರಾಷ್ಟ್ರೀಯ ಮಟ್ಟದ ಸಲಹೆಗಾರರನ್ನು ನಿರ್ಮಾಣ ಮೇಲ್ವಿಚಾರಣೆಗೆ ನಿಯುಕ್ತಿಗೊಳಿಸಲಾಗಿದೆ ರಸ್ತೆಯ ನಿರ್ಮಾಣದ ಎಲ್ಲ ಕೆಲಸಗಳು ಅಂತರರಾಷ್ಟ್ರೀಯ ಸಲಹೆಗಾರರ ಇಂಜಿನಿಯರ್‌ರವರ ಅನುಮತಿ ಮೇರೆಗೆ ನಿರ್ವಹಿಸಲಾಗುತ್ತಿದ್ದು, ಇವರು ಗುಣಮಟ್ಟದ ಬಗ್ಗೆ ಸಂಪೂರ್ಣ ಹತೋಟಿ ಹೊಂದಿರುತ್ತಾರೆ ಮೇಲಾಗಿ ಇಲಾಖಾ ಮೇಲಾಧಿಕಾರಿಗಳು ಹಾಗೂ ವಿಶ್ವಬ್ಯಾಂಕ್ ಮೇಲ್ವಿಚಾರಣ ತಂಡಗಳು ಆಗಿಂದಾಗ್ಗೆ ಕಾಮಗಾರಿಯ ಪರಿವೀಕ್ಷಣೆ ನಡೆಸುತ್ತಾರೆ ಅಲ್ಲದೆ ನಿಗಧಿತ ಗುಣ ಪರೀಕ್ಷೆಗಳನ್ನು ನಿಯಮಿತವಾಗಿ ಕೈಗೊಂಡು ಈ ಬಗ್ಗೆ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿ ಇಡಲಾಗಿದ್ದು, ಗುಣಪರೀಕ್ಷೆಗಳ ದೃಢೀಕರಣದ ನಂತರವೇ ಗುತ್ತಿಗೆದಾರರ ಹಣ ಪಾವತಿಸಲಾಗುತ್ತದೆ

ಉಳಿದ ಮನಃಶ್ಚೇತನ ಕಾಮಗಾರಿಗಳನ್ನು ಇಲಾಖೆಯ ಮೇಲ್ವಿಚಾರಣೆಯೊಂದಿಗೆ ನಿರ್ಮಾಣದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಈ

ಕಾಮಗಾರಿಗಳ ನಿರ್ಮಾಣದ ಗುಣಮಟ್ಟವನ್ನು ಪರೀಕ್ಷಿಸಲು ಸ್ವತಂತ್ರ ಸಲಹೆಗಾರರನ್ನು (independent audit consultant) ನೇಮಿಸಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ

ಈ ಎಲ್ಲಾ ಕಾಮಗಾರಿಗಳಿಗೂ ಉನ್ನತ ದರ್ಜೆಯ specification ಅನ್ನು ನಿರ್ಧರಿಸಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಗುತ್ತಿಗೆದಾರರು ಮಾಡಿರುವ ಕೆಲಸವು ನಿರ್ಧರಿಸಿದ ಗುಣಮಟ್ಟಕ್ಕೆ ಇಲ್ಲದೆ ಇದ್ದುದು ಕಂಡು ಬಂದಲ್ಲಿ ಸದರಿ ಗುತ್ತಿಗೆದಾರರಿಂದಲೇ ಅವರ ವೆಚ್ಚದಲ್ಲಿ ಸರಿಪಡಿಸಲು ಕ್ರಮ ತೆಗೆದುಕೊಂಡಿರುತ್ತದೆ

ಗುತ್ತಿಗೆ ಕರಾರಿನ ಪ್ರಕಾರ, ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ, ಈ ರಸ್ತೆಗಳು ಒಂದು ವರ್ಷದ ಅವಧಿಯವರೆಗೂ ಡಿಫೆಕ್ಟ್ ಲಯಬಿಲಿಟಿ ಪಿರಿಯಡ್ (defect liability period) ಎಂದು ಸೂಚಿಸಲಾಗಿದ್ದು, ಈ ಅವಧಿಯಲ್ಲೂ ಯಾವುದಾದರೂ ದೋಷಗಳು ಕಂಡು ಬಂದಕಲ್ಲಿ, ಗುತ್ತಿಗೆದಾರರು ತಮ್ಮ ವೆಚ್ಚದಲ್ಲೇ ಈ ದೋಷಗಳನ್ನು ಸರಿಪಡಿಸಬೇಕಾಗಿರುತ್ತದೆ

ಕಳಪೆ ಗುಣಮಟ್ಟದಿಂದ ಮೇಲ್ದರ್ಜೆಗೇರಿಸಿದ ಕಾಮಗಾರಿಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆದರೆ ಪುನಃಶ್ಚೇತನ ಅಡಿಯಲ್ಲಿ ಶೆಡ್ಬಾಳ್– ಸಂಕೇಶ್ವರ ರಸ್ತೆ [M-4] ಪ್ಯಾಕೇಜಿನಲ್ಲಿ ಬೆಳಗಾಂ ಜಿಲ್ಲೆಗೆ ಸಂಬಂಧಿಸಿದಂತೆ, ಕಳಪೆ ಕಾಮಗಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ಗುತ್ತಿಗೆದಾರರ ಖರ್ಚಿನಲ್ಲಿಯೇ ಕಾಮಗಾರಿಯನ್ನು ಸರಿಪಡಿಸಲಾಗುತ್ತಿದೆ

ಉ) ಮೇಲಿನಂತೆ ಕ್ರಮ ಕೈಗೊಳ್ಳಲಾಗಿದೆ

301 (29) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಒಟ್ಟು ಸಂಖ್ಯೆ ಎಷ್ಟು ,